Reg No BG 155 13-1-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ ರ ಶು ರಾ ಂ ಹೊ ಲ್

ಸೆಯ್ಯಾಜಿರಾವ್ ರೋಡ್, ಮೈಸೂರು

ಹಬ್ಬಕ್ಕೆ ಆಕರ್ಷಣೀಯವಾದ ಬಟ್ಟೆಗಳು ಬಂದಿವೆ. ಸರಿಯಾದ ಬೆಲೆಗೆ ದೊರೆಯುತ್ತೆ.

ನಿಮಗೆ ಬೇಕಾದ್ದನ್ನು ತೆಗೆದುಕೊಳ್ಳಿ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಸ್ರಜ್ಞಾರಸಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಚೀನಾ ಆಕ್ರಮಿತ ಪ್ರದೇಶಗಳನ್ನು ವಾಪಸು ಹೊಂದಲು ನಿರ್ಧಾರ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಶಿಕ್ಷಣಕ್ಕೆ ಆತಂಕ

ಕಲ್ಲಿಕೋಟೆ – ವಿದ್ಯಾರ್ಥಿಗಳ ಅಶಾಂತಿಯಿಂದ ಕೇರಳದ ಕಾಲೇಜುಗಳು 85 ಕೆಲಸದ ದಿನಗಳಲ್ಲಿ 18 ದಿನ ಮಾತ್ರ ಕೆಲಸ ಮಾಡಿವೆ.

ಘೇರಾವೊ ಮೂಲಕ ಮದುವೆ

ತಿರುವನಂತಪುರಂ— ವಿವಾಹಿತನೂ, ನಾಲ್ಕು ಮಕ್ಕಳ ತಂದೆಯೂ ಆಗಿರುವ 38 ವರ್ಷದ ರಾಜ್ಯ ಎಂಬ ಪೋಲೀಸರವನನ್ನು ಅನಯೂರದ ಒಬ್ಬ ಹುಡುಗಿಯೊಡನೆ ಸಂಬಂಧ ಹೊಂದಿದ್ದು, ಆ ಹುಡುಗಿಯು ಪೋಲೀಸು ಸ್ಟೇಷನ್ನಿಗೆ ಬಂದಿದ್ದಳೆಂದೂ, ಶನಿವಾರ ಬೆಳಿಗ್ಗೆ ಹುಡುಗಿಯ ಮನೆಯಲ್ಲಿ ಇಬ್ಬರನ್ನೂ ಕಂಡ ಗುಂಪು ಆ ಮನೆಗೆ ಘೇರಾವೊ ಮಾಡಿ ಅವರಿಬ್ಬರಿಗೂ ಅಲ್ಲೇ ಬಲಾತ್ಕಾರದಿಂದ ವಿವಾಹ ಮಾಡಿಸಿತೆಂದೂ ವರದಿಯಾಗಿದೆ.

ಶ್ರೀ ಸಿ. ನಿ. ಯವರ ಕಾರಿಗೆ ಕಲ್ಲಿನೇಟು

ಪಾಟ್ನಾ— ಶನಿವಾರ ಬೆಳಿಗ್ಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಚುನಾವಣಾ ಸಭೆಯಲ್ಲಿ ಭಾಷಣ ಮಾಡಲು ಬರುತ್ತಿದ್ದಾಗ, ವಿದ್ಯಾರ್ಥಿಗಳೂ ಸೇರಿದ್ದ ಭಾರಿ ಗುಂಪು ವೇದಿಕೆಯನ್ನು ಸುಟ್ಟು, ಅವರ ಕಾರಿಗೆ ಕಲ್ಲು ಹೊಡೆದರು – ಕಾರಿನಾರಿನಲ್ಲಿ ಪೋಲೀಸರು ಗ್ರೋಳೀಬಾರು ಮಾಡಿದ್ದನ್ನು ಪ್ರತಿಭಟಿಸಿ ಈ ಕಾರ್ಯ – ಬೀಹಾರಿನ ವಿವಿಧ ಜಿಲ್ಲೆಗಳಲ್ಲಿ ಸಾವಿರಕ್ಕೂ ಮೇಲ್ಪಟ್ಟು ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಬಿಟ್ಟು ಜೋಕ ತಾಂತ್ರಿಕ್ ಪಕ್ಷಕ್ಕೆ ಸೇರಿರುವರು.

★

ನೀಗ್ರೋ ನಾಯಕನಿಗೆ ಸನ್ಮಾನ

ನವದೆಹಲಿ— ತಮ್ಮ ದಿ || ಪತಿ ಡಾ || ಮಾರ್ಟಿ ಲೂಥರ್ ಕಿಂಗ್‌ರ ಪರವಾಗಿ ನೆಹ್ರೂ ಪಾರಿತೋಷಕ ಸ್ವೀಕರಿಸಲು ಬರುವ ಅವರ ಪತ್ನಿ ಕೊರೆಟಾರನ್ನು ರಾಜಾ ಘಾಟಿನ ಹತ್ತಿರ ಒಂದು ಬಹಿರಂಗ ಸಭೆಯಲ್ಲಿ ಸನ್ಮಾನಿಸಲು ಗಾಂಧೀ ಸಂಸ್ಥೆಗಳು ನಿರ್ಧರಿಸಿವೆ.

★

ಯೋಗಿಯ ಅದ್ಭುತ ಸಾಹಸ

ಚಿಕ್ಕಬಳ್ಳಾಪುರ— ಹಠಯೋಗಿ ಶ್ರೀ ಯೋಗಾನಂದ ಸ್ವಾಮಿಯವರು ಮೈಲಪಾನ ಹಳ್ಳಿಗೆ ತಾ|| 4 ರಲ್ಲಿ ಬಂದು ಒಂದು ಮಂಟಪದಲ್ಲಿ ತಾ| 6 ರಿಂದ 45 ದಿನಗಳ ಧ್ಯಾನವ್ರತಕ್ಕೆ ಕೈಗೊಂಡಿರುವರು – ಅವರ ಹೇಳಿಕೆಯಂತೆ ಮಂಟಪಕ್ಕೆ ಬೀಗಹಾಕಲ್ಪಟ್ಟಿದೆ – ಮಹಾಶಿವರಾತ್ರಿಯಂದು ಧ್ಯಾನದಿಂದ ಏಳುವರು – 60 ವರ್ಷದ ಈ ಯೋಗಿಯು 7 ವರ್ಷಗಳಿಂದ ಆಹಾರ ಸ್ವೀಕರಿಸುತ್ತಿಲ್ಲವೆಂದೂ, 92 ದಿವಸ ಭೂ ಸಮಾಧಿಯಲ್ಲಿದ್ದರೆಂದೂ ಹೇಳಲಾಗಿದೆ.

ಇರ್ಷಾ ಮಧ್ಯಸ್ಥಿಕೆ

ಇಸ್ಲಾಮಾಬಾದ್.... ಭಾರತದೊಡನೆಯ ಪಾಕಿಸ್ತಾನದ ವ್ಯಾಜ್ಯ ವ್ಯವಸ್ಥೆಗೆ ಇರ್ಷಾ ಮಧ್ಯಸ್ಥಿಕೆಗೆ ಪಾಕಿಸ್ತಾನ ಒಪ್ಪಿದೆ.

★

ಗ್ರೋಳೀಬಾರ್

ಪಾಟ್ನಾ— ಟಿಕೀಟಿಲ್ಲದೆ ಪ್ರಯಾಣ ಮಾಡುತ್ತಿದ್ದ ಹೆಚ್ಚಾಗಿ ವಿದ್ಯಾರ್ಥಿಗಳಿಂದ ಕೂಡಿದ ಪ್ರಯಾಣೀಕರ ಮೇಲೆ ಕಾರಿಸಾತ್ ಸ್ಟೇಷನ್ನಿನಲ್ಲಿ ರೈಲ್ವೆ ಪೋಲೀಸರು ಗುಂಡು ಹಾರಿಸಿದರು – ಇಬ್ಬರು ಸತ್ತು ಒಬ್ಬ ಗಾಯಗೊಂಡನು – ಗುಂಪಿನ ಕಲ್ಲು ಹೊಡೆತದಿಂದ ಕೆಲವರು ಪೋಲೀಸರು ಗಾಯಗೊಂಡರು.

●

ಅಪಾರ ಚಿನ್ನ ನಷ

ಕೊಚ್ಚಿ— ರೂ. 75 ಲಕ್ಷದ ಚಿನ್ನ ರೂ. 7.5 ಲಕ್ಷ ಬೆಲೆಯ 5000 ಸೈಗರೇಟುಗಳನ್ನು ಹೊತ್ತಿದ್ದ ಸಮುದ್ರದಲ್ಲಿ ಹೋಗುತ್ತಿದ್ದ ಒಂದು ನೌಕೆಯಿಂದ ಕಸ್ಟಂಸಿನವರು ವಶಪಡಿಸಿಕೊಂಡರು.

ಚೀನಾ ಆಕ್ರಮಿತ ಸ್ಥಳಗಳು

ಕಲ್ಕತ್ತಾ— ಕಮ್ಯೂನಿಸ್ಟು ಚೀನಾ ಆಕ್ರಮಿಸಿರುವ ಭಾರತದ ಸ್ಥಳಗಳನ್ನು ಪುನಃ ಪಡೆಯಲು ಭಾರತವು ನಿರ್ಧರಿಸಿದೆ ಎಂದು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಘೋಷಿಸಿದರು.

●

ಮಂತ್ರಿಗಳಿಗೆ ಸೌಲಭ್ಯಗಳಿಲ್ಲ

ಕಲ್ಕತ್ತಾ— ಚುನಾವಣಾ ಚಳವಳಿಗೆ ಬರುವ ಕೇಂದ್ರ ಮಂತ್ರಿಗಳು ಮತ್ತು ಸ್ಟೇಟ್ ಮಂತ್ರಿಗಳಿಗೆ ವಾಹನ ಮತ್ತು ವಸತಿ ಸೌಲಭ್ಯ ಒದಗಿಸದಿರಲು ಪಶ್ಚಿಮ ಬಂಗಾಳ ಸರಕಾರ ನಿರ್ಧರಿಸಿದೆ – ಪ್ರಧಾನಿ ಇಂದಿರಾರಿಗೆ ಮಾತ್ರ, ರಕ್ಷಣಾ ಕಾರಣಕ್ಕಾಗಿ ಅವರು ಚುನಾವಣಾ ಪ್ರಚಾರಕ್ಕೆ ಬಂದರೂ ಎಂದಿನಂತೆ ಅಧಿಕೃತ ಸೌಲಭ್ಯಗಳು ಒದಗಿಸಲಾಗುವುದು.

○

ನಾಗಾ ಗುರಿಲಾಗಳು

ಷಿಲಾಂಗು— ಚೀನಾದಲ್ಲಿ ತರಬೇತಾಗಿ ನಾಗಾಲ್ಯಾಂಡಿಗೆ ಬರಲಿರುವ 1000 ನಾಗಾ ಗುರಿಲಾಗಳು ಪೂರ್ವ ಪಾಕಿಸ್ತಾನಕ್ಕೆ ತಲಪಿರುವರೆಂದು ವರದಿಯಾಗಿದೆ.

★

ಭಾವಚಿತ್ರ ದಹನ

ಖಮ್ಮಾಂ— ವಿದ್ಯಾರ್ಥಿಗಳು ಆಂಧ್ರ ಮುಖ್ಯ ಮಂತ್ರಿಯರ ಭಾವಚಿತ್ರವನ್ನು ಶವಪೆಟ್ಟಿಗೆಯಲ್ಲಿಟ್ಟು ಸಿರವಣಿಗೆಯಲ್ಲಿ ತಂದು ಸುಟ್ಟರು.

○ನವದೆಹಲಿ— ಏ ಐ ಆರ್ ಹಿಂದಿ ವಾರ್ತಾ ಪ್ರಸಾರದ ಕಾಲದಲ್ಲಿ ಬದಲಾವಣೆ ಯೋಜಿಸಿಲ್ಲವೆಂದು ಪ್ರಕಟವಾಗಿದೆ.

○ನವದೆಹಲಿ— ಕಚ್ ತೀರ್ಪಿನ ವಿರುದ್ಧ ಸುಪ್ರೀ ಕೋರ್ಟಿನಲ್ಲಿ ಹಾಕಿದ್ದ ರಿಟ್ ಅರ್ಜಿಗಳು ವಜಾನೂಡಲ್ಪಟ್ಟವು.

ವಿವಾಹಗಳ ವಿವಿಧ ರೀತಿ

ಈಚಿನ ವರ್ಷಗಳಲ್ಲಿ ನಡೆದ ಅತಿ ಸಾಹಸ ಮದುವೆಗಳಲ್ಲಿ ಪ್ರಮುಖವಾದುದೆಂದರೆ ಫ್ರಾನ್ಸಿನ ಟುಲೋಸಿನಲ್ಲಿ ನಡೆದದ್ದು. ಹಗ್ಗದ ಮೇಲೆ ಕಸರತ್ತು ಮಾಡುವ (ಮೊಂಟರಾಟ) ಗಂಡು ಹೆಣ್ಣಿನ ವಿವಾಹವು ಭೂಮಿಗೆ 60 ಅಡಿ ಮೇಲೆ ಎರಡು ಬಿಗಿಯಾದ ಉಕ್ಕಿನ ಹಗ್ಗದ ಮೇಲೆ ನಡೆಯಿತು : ಅವರು ಮೊಣಕಾಲೂರಿ ಕುಳಿತಿದ್ದರು : ಒಳ್ಳೇ ಬಟ್ಟೆ ಧರಿಸಿದ್ದರು – ಆಗ್ನಿಶಾಮಕ ಏಣಿಯ ಮೇಲೆ ಹತ್ತಿ ವಿವಾಹ ನೆರವೇರಿಸಿದ ಪುರೋಹಿತನು " ಜನರ ಕಸುಬಿನ ಭೀಕರ ಅಪಾಯವನ್ನು ನಾನು ಅನೇಕರಿಗಿಂತ ನಾನು ಹೆಚ್ಚು ತಿಳಿದೆನು " ಎಂದನು. 20 ಸಾವಿರ ಪ್ರೇಕ್ಷಕರಿದ್ದರು.

ಫ್ಲಾರಿಡಾದ ಮಿಯಾಮಿಯಲ್ಲಿ ಒಂದು ಬೆತ್ತಲೆ ಶಿಬಿರದಲ್ಲಿ ಪೂರ್ಣ ನಗ್ನರಾಗಿದ್ದ ವಧುವರರ ವಿವಾಹವನ್ನು ಮೈತುಂಬ ಬಟ್ಟೆ ಧರಿಸಿದ್ದ ಲಾಯರೊಬ್ಬರು ನೆರವೇರಿಸಿದರು : ಸಮಾರಂಭದಲ್ಲಿ 200 ಮಂದಿ ಹಾಜರಿದ್ದರು.

ಫಿಲಿಡಲ್ಫಿಯಾದಲ್ಲಿ ಒಂದು ವಿವಾಹವು ನೀರಿನಲ್ಲಿ 15 ಅಡಿ ಆಳದಲ್ಲಿ ನಡೆಯಿತು : ಪುರೋಹಿತನು ನೀರಿನ ಮೇಲೆ ರಚಿಸಲಾಗಿದ್ದ ಪ್ಲಾಟ್‌ಫಾರಂನಿಂದ ನೈಕೆಕ್ರೀಫೋನು ಮೂಲಕ ವಿವಾಹ ನೆರವೇರಿಸಿದನು.

ಲಾಸ್ ಏಂಜಲ್ಸಿನ ಒಂದು ದಂಪತಿಗಳ ವಿವಾಹವು ಈಜುವ ಕೊಳದ ತಟದಲ್ಲಿ ನಡೆಯಿತು.

ಅಮೇರಿಕಾದ ನ್ಯೂಯಾರ್ಕಿನ ದಂಪತಿಗಳ ಒಂದು ವಿವಾಹವು 2100 ಅಡಿ ಎತ್ತರದಲ್ಲಿ ವಿಮಾನದಲ್ಲಿ ನಡೆಯಿತು.

ಟೆಲಿಫೋನ್ ಮೂಲಕ ನಡೆದ ವಿವಾಹವಿದು– ವಧು ಸ್ಟಾಕ್‌ಹಾಂನ್ನಲ್ಲಿ, ವರ ಡೆಟ್ರಾಯಿಟ್‌ನಲ್ಲಿ ; ಅವರ ಧ್ವನಿಯು ನ್ಯೂಯಾರ್ಕ್, ಮೈಕ್ ತೀರ, ಗ್ಲಾಸ್ಗೋ, ಲಂಡನ್ ಮೂಲಕ ಕಳುಹಿಸಲಾಯಿತು.

ಅಮೇರಿಕಾದ ಓರ್ವ ದಂಪತಿಗಳು " ವಿಶ್ವವೆಲ್ಲಾ ಪ್ರೇಮಿಯನ್ನು ಪ್ರೀತಿಸುತ್ತದೆ " ಎಂಬ ನಾಣ್ನುಡಿಯನ್ನು ಸಾರ್ಥಕ ಪಡಿಸಲು, ತಮ್ಮ ವಿವಾಹಕ್ಕೆ ತಮ್ಮ ಶತ್ರುಗಳನ್ನೆಲ್ಲಾ ಆಹ್ವಾನಿಸಿದ್ದರು.



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 4ನೇ ವಾರ

ಆದ್ಭುತ, ಅಸಮಾನ, ಅಸಾಧಾರಣ ಫಿಲಂಗೀಳಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಆಪೆರಾ— 10-1-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಕಾದಲ್ ವಾಹನಂ

ನಟವರ್ಗ— ಎಂ ಜಿ ರಾಮಚಂದ್ರ್, ತಾಯ್ ನಾಗೇಶ್, ಅಶೋಕ್
ಸ್ಯಾಂಡೋ ಚಿನ್ನಪ್ಪದೇವರ್, ಸುಂದರರಾಜ್ ಜಯಲಲಿತ, ಮನೋರಮ

.... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi. Sri Opera Talkies, Padmabhushana Dr. M. C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4